

بِسْمِ اللَّهِ الرَّحْمَنِ الرَّحِيمِ

# ಜಮಾಅತ್ ಸದಸ್ಯರಿಗೆ ಕೆಲವು ಅಮೂಲ್ಯ ಉಪದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ ರಾನ್‌ಹೈಮ್‌ನಿಂದ 21–04–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ಅವರನ್ನು ಬೈಅತ್ ಮಾಡಿದವರಲ್ಲಿ ಸೇರಿಕೊಂಡಿರುವುದು ಅಲ್ಲಾಹನು ನಮಗೆ ನೀಡಿದ ಅನುಗ್ರಹವಾಗಿದೆ. ಇದು ನಮ್ಮ ವಿಶ್ವಾಸವನ್ನು ವರ್ಧಿಸುವ ಮಾರ್ಗವಾಗಬೇಕು. ಏಕೆಂದರೆ ನಾವು ನಂಬಿದ ನಂತರ ನಮ್ಮ ವಿಶ್ವಾಸವನ್ನು ದೃಢಪಡಿಸಿಕೊಳ್ಳದೆ ಇದ್ದರೆ ನಾವು ನಂಬಿದುದರಿಂದ ಯಾವ ಪ್ರಯೋಜನವೂ ಸಿಗಲಾರದು. ನಾವು ಯಾವುದೇ ಕೀಳರಿಮೆಯ ಭಾವನೆ ಹೊಂದದೆ ಯಾವುದೇ ಹೇಡಿತನ ಪ್ರಕಟಿಸದೆ ನಾವು ಬಹಿರಂಗವಾಗಿ ಇಸ್ಲಾಮಿನ ಸಂದೇಶವನ್ನು ತಲಪಿಸಬೇಕಾಗಿದೆ. ಕೆಲವು ಸಾರಿ ಯುವಕರಲ್ಲಿ ಮತ್ತು ಯುವತಿಯರಲ್ಲಿ ಹೀಗೆ ಯೋಚನೆ ತಲೆ ದೋರುತ್ತದೆ: ಮುಸ್ಲಿಮರ ಇಂದಿನ ದುಸ್ಥಿತಿ ಮತ್ತು ಗಲಬೆಗೊಂದಲಗಳು ಅವರಿಂದಲೇ ಸಂಭವಿಸುತ್ತವೆ ಎಂಬ ಆಪಾದನೆಗಳ ಕಾರಣ ಇಸ್ಲಾಮಿನ ಬಗ್ಗೆ ಹೆಚ್ಚಾಗಿ ಮಾತನಾಡಬಾರದು ಎಂದು ಅವರು ಯೋಚಿಸುತ್ತಿದ್ದಾರೆ. ಆದರೆ ವಾಸ್ತವಿಕವಾಗಿ ಅನ್ಯ ಮುಸ್ಲಿಮರ ಕೃತ್ಯಗಳು ನಮ್ಮಲ್ಲಿ ಹೆಚ್ಚು ಧೈರ್ಯ ಸೃಷ್ಟಿಸುವುದಾಗಿರಬೇಕು. ಇಸ್ಲಾಮಿನ ವಾಸ್ತವಿಕ ಚಿತ್ರವನ್ನು ಲೋಕಕ್ಕೆ ತೋರಿಸಿಕೊಟ್ಟು, ಮುಸ್ಲಿಮರ ಸ್ಥಿತಿ ಹೀಗೆ ಆಗಿರುವುದು ಇಸ್ಲಾಮ್ ಧರ್ಮದ ಸತ್ಯತೆಗೆ ಸಾಕ್ಷ್ಯಾಧಾರವಾಗಿದೆ ಎಂದು ನಾವು ಲೋಕಕ್ಕೆ ಹೇಳಿಕೊಡಬೇಕು. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಬಗ್ಗೆ ಭವಿಷ್ಯ ನುಡಿದಿದ್ದಾರೆ. ಮುಂದೆ ಒಂದು ಕಾಲಘಟ್ಟದಲ್ಲಿ ಮುಸ್ಲಿಮರಲ್ಲಿ ಬಿಗಡಾಯಿಸುವಿಕೆ ತಲೆದೋರುವುದು, ಗಲಬೆ ಗೊಂದಲ ಹಿಂಸಾಚಾರಗಳು ಸಂಭವಿಸುವುವು ಹಾಗೂ ಮುಸ್ಲಿಮ್ ಮತಪಂಡಿತರೆಂಬ ನಾಮಧಾರಿಗಳು ಈ ದುಸ್ಥಿತಿಗೆ ಹೊಣೆಯಾಗುವರು ಎಂದು ಭವಿಷ್ಯ ನುಡಿದಿದ್ದಾರೆ. ಆ ಕಾಲದಲ್ಲಿ ಲೌಕಿಕ ಆಶಾಭಿಲಾಷೆಗಳು ಮುಸ್ಲಿಮರಲ್ಲಿ ಆವರಿಸಿರುವುದು. ಆ ಕಾಲಘಟ್ಟದಲ್ಲಿ ವಾಗ್ದತ್ತ ಮಹ್‌ದೀ ಮಸೀಹರು ಆಗಮಿಸುವರು. ಇಸ್ಲಾಮಿನ ವಾಸ್ತವಿಕ ಚಿತ್ರವನ್ನು ಅವರು ಲೋಕಕ್ಕೆ ತೋರಿಸಿಕೊಡುವರು ಎಂದು ಸಹ ಭವಿಷ್ಯ ನುಡಿಯಲಾಗಿದೆ. ಅಹ್ಮದಿಯರಾದ ನಾವು ವಾಗ್ದತ್ತ ಮಸೀಹರನ್ನು ನಂಬುವವರಾಗಿದ್ದೇವೆ. ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರು ಇಸ್ಲಾಮ್ ಧರ್ಮದ ತತ್ವಗಳನ್ನು ಸುಂದರ ರೂಪದಲ್ಲಿ ನಮಗೆ ತೋರಿಸಿದ್ದಾರೆ ಮತ್ತು ಕಲಿಸಿದ್ದಾರೆ. ನಾವು ಆ ತತ್ವಗಳನ್ನು ಅನುಷ್ಠಾನಕ್ಕೆ ತರುವವರಾಗಿದ್ದೇವೆ ಎಂದು ನಾವು ಲೋಕದ ಮುಂದೆ ಪ್ರತಿಪಾದಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಜಮಾಅತಿನ ಉದ್ದೇಶ ಕೇವಲ ನಂಬಿಕೆಗಳ ಸುಧಾರಣೆ ಮಾತ್ರವಲ್ಲ. ಎಲ್ಲ ಹಂತದಲ್ಲೂ ಎಲ್ಲ ರೀತಿಗಳಲ್ಲೂ ಕರ್ಮಗಳ ಸುಧಾರಣೆ ಮಾಡುವ ಜಮಾಅತ್ ಇದಾಗಿದೆ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ತನ್ನ ಸ್ಥಿತಿಯನ್ನು ಪರಿಶೋಧಿಸಬೇಕಾಗಿದೆ– ನಾವು ಈ ರೀತಿಯಲ್ಲಿ ವರ್ತಿಸಲು ಪ್ರಯತ್ನ ಮಾಡಿದ್ದೇವೆಯೋ ಇಲ್ಲವೋ ಎಂದು. ನಮ್ಮ ಜನಸಂಖ್ಯೆ ವರ್ಧಿಸುವಾಗ ನಮ್ಮ ಬಗ್ಗೆ ಜನರಿಗೆ ಹೆಚ್ಚು ಪರಿಚಯವಾಗುವುದು ಸಹಜವಾಗಿದೆ. ನಾವು ಜನರಿಂದ ಗುರುತಿಸಲ್ಪಡುವಾಗ ಜನರ ವಿಮರ್ಶಾತ್ಮಕ ದೃಷ್ಟಿ ಸಹ ವರ್ಧಿಸುವುದು. ಅದು ವರ್ಧಿಸುತ್ತಾ ಇದೆ. ಈ ಸ್ಥಿತಿ ನಮ್ಮಿಂದ ಆವಶ್ಯಪಡುವುದೇನೆಂದರೆ ನಮ್ಮ ಪೈಕಿ ಪ್ರತಿಯೊಬ್ಬನು ತನ್ನ ಕರ್ಮಾನುಷ್ಠಾನಗಳ ಮಟ್ಟವನ್ನು ವರ್ಧಿಸಬೇಕು. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವುದರ ಉದ್ದೇಶಲಕ್ಷ್ಯವನ್ನು ಈಡೇರಿಸಬೇಕು.

ಕಳೆದ ಕೆಲವು ದಿನಗಳಲ್ಲಿ ಜರ್ಮನಿಯ ವಿವಿಧ ನಗರಗಳಲ್ಲಿ ಮಸ್‌ಜಿದ್‌ಗಳ ಉದ್ಘಾಟನೆಗಳು ಮತ್ತು ಮಸ್‌ಜಿದ್‌ಗಳಿಗೆ ಅಸ್ತಿಭಾರ ಹಾಕುವ ಸಮಾರಂಭಗಳು ಜರಗಿದುವು. ಈ ಸಮಾರಂಭಗಳಲ್ಲಿ ಭಾಗವಹಿಸಿದ ಸ್ಥಳೀಯ ಜನರು ಹಾಗೂ ಸ್ಥಳೀಯ ರಾಜಕಾರಣಿಗಳು ಪ್ರಕಟಿಸಿದ ಅಭಿಪ್ರಾಯಗಳಿಂದ ತಿಳಿದು ಬಂದುದೇನೆಂದರೆ ಅಲ್ಲಾಹನ ಅನುಗ್ರಹದಿಂದ ಸ್ಥಳೀಯ ಅಹ್ಮದಿಯರು ಸ್ಥಳೀಯ ಜನರ ಮೇಲೆ ಉತ್ತಮ ಪ್ರಭಾವ ಬೀರುತ್ತಿದ್ದಾರೆ. ಆದರೆ ಇಸ್ಲಾಮ್ ಧರ್ಮದ ನೈಜ ತತ್ವಗಳ ಬಗ್ಗೆ ಸ್ಥಳೀಯ ಜನರಿಗೆ ಸರಿಯಾದ ರೀತಿಯಲ್ಲಿ ಪರಿಚಯ ಮಾಡಿಕೊಟ್ಟಿಲ್ಲ ಎಂದು ನನಗೆ ಮನವರಿಕೆಯಾಯಿತು. ಏಕೆಂದರೆ ಅನೇಕ ಜನರು ಹೇಳಿದರು: ನೀವು ವಿವರಿಸಿದ ಇಸ್ಲಾಮಿನ ನೈಜ ತತ್ವಗಳ ಬಗ್ಗೆ ನಮಗೆ ತಿಳಿದಿರಲಿಲ್ಲ. ಸಂಪರ್ಕ ಮಾಧ್ಯಮಗಳು ನಮಗೆ ತೋರಿಸಿಕೊಡುತ್ತಿರುವ ಇಸ್ಲಾಮ್ ಧರ್ಮದ ಚಿತ್ರಣ ಮಾತ್ರ ನಮ್ಮ ಮನಸ್ಸಿನಲ್ಲಿತ್ತು ಎಂದು ಹೇಳಿದರು.

ಇಸ್ಲಾಮ್ ಧರ್ಮ ತತ್ವಗಳನ್ನು ನಮ್ಮಿಂದ ಆಲಿಸಿದ ನಂತರ ಜನರು ಹೇಗೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುತ್ತಾರೆ ಎಂಬುದರ ಬಗ್ಗೆ ಕೆಲವು ಉದಾಹರಣೆಗಳನ್ನು ನಾನು ನೀಡುತ್ತೇನೆ. ಒಬ್ಬ ಡಾಕ್ಟರ್ ಹೇಳಿದರು: ನಾನು ಈ ದಿನ, ದ್ವೇಷದ ಮೂಲಕವಲ್ಲ ಪ್ರೀತಿಯ ಮೂಲಕ ಹರಡುವ ಇಸ್ಲಾಮನ್ನು ಕಂಡೆನು. ಒಬ್ಬ ಮಹಿಳೆ ಹೇಳಿದರು: ಈ ದಿನ ನಾನು ಆಲಿಸಿದ ಮಾತುಗಳನ್ನು ಈ ಹಿಂದೆ ಯಾವುದೇ ಮುಸ್ಲಿಮ್ ಲೀಡರ್‌ನಿಂದ ನಾನು ಆಲಿಸಿರಲಿಲ್ಲ. ಮಿಸ್ ಎಸ್ತರ್ ಎಂಬ ಇನ್ನೊಬ್ಬ ಮಹಿಳೆ ಹೇಳಿದರು: ನಾನು ನನ್ನ ಹೃದಯದಲ್ಲಿರಿಸಿ ಇಲ್ಲಿಗೆ ತಂದ ಎಲ್ಲ ಪ್ರಶ್ನೆಗಳಿಗೂ ನಿಮ್ಮ ಖಲೀಫರು ನನಗೆ ಉತ್ತರ ನೀಡಿದ್ದಾರೆ. ನಾನು ಈ ದಿನ ಇಂತಹ ಸುಂದರ ಮಾತುಗಳನ್ನು ಆಲಿಸಿರುವಾಗ, ನಾಳೆ ಏನಾದರೂ ಇಸ್ಲಾಮಿನ ಹೆಸರಲ್ಲಿ ಒಬ್ಬ ಭಯೋತ್ಪಾದಕ ಆಕ್ರಮಣ ನಡೆಸಿದರೆ ಜನರು ಅದರ ಕಡೆಗೆ

ಗಮನ ಹರಿಸಿ ಈ ಶಾಂತಿದಾಯಕ ಸಂದೇಶ ಮರೆತುಬಿಡುವರೇ ಎಂದು ನಾನು ಭಯಪಡುತ್ತೇನೆ. ವಾಸ್ತವಿಕವಾಗಿಯೂ ಹೀಗೆಯೇ ಸಂಭವಿಸುತ್ತದೆ. ಇಸ್ಲಾಮಿನ ಒಳ್ಳೆಯ ಚಿತ್ರ ಲೋಕದ ಮುಂದೆ ಬರಬಾರದೆಂದು ಮಾಧ್ಯಮಗಳು ಪ್ರಯತ್ನ ಮಾಡುತ್ತಾ ಇರುತ್ತವೆ. ಆದುದರಿಂದ ನಾವು ಮಾಡಬೇಕಾದ ಕೆಲಸವೇನೆಂದರೆ ಈ ಸಂದೇಶವನ್ನು, ಪ್ರೀತಿ, ಸೌಹಾರ್ದದ ಸಂದೇಶವನ್ನು ಸೃಷ್ಟಿಕರ್ತನ ಹಕ್ಕುಗಳನ್ನು ಮತ್ತು ಜನರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಇರುವ ಸಂದೇಶವನ್ನು ವಿಶಾಲವಾಗಿ ಹರಡಲು ಪ್ರಯತ್ನಿಸಬೇಕು. ಇಸ್ಲಾಮಿನ ಹೆಸರಿನಲ್ಲಿ ಮುಸ್ಲಿಮ್ ನಾಮಧಾರಿಗಳು ಈ ರೀತಿ ಕುಕೃತ್ಯ ನಡೆಸುತ್ತಿರುವಾಗ ನಾವು ಇಸ್ಲಾಮಿನ ಸುಂದರ ತತ್ವಗಳನ್ನು ಲೋಕದ ಮುಂದಿರಿಸಬೇಕು.

ಯುನಿವರ್ಸಿಟಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಯೋಚಿಸುತ್ತಾರೆ– ನಾವು ಹಿಂದಿನ ಕಾಲದ ಕರ್ಮಶಾಸ್ತ್ರ ಪಂಡಿತರ ಮತ್ತು ವಿದ್ವಾಂಸರ ಗ್ರಂಥಗಳನ್ನು ಓದಿ ಅಥವಾ ಪುರಾತನ ಇಮಾಮರ ಮತ್ತು ವಲಿಗಳ ಜೀವ ಚರಿತ್ರೆ ಓದಿ ನಮ್ಮ ಜ್ಞಾನ ಬಹಳ ವರ್ಧಿಸಿದೆ ಹಾಗೂ ನಮ್ಮ ಜ್ಞಾನವನ್ನು ಎದುರಿಸಲು ಪ್ರಾಯಶಃ ಯಾರಿಗೂ ಸಾಧ್ಯವಿಲ್ಲ ಎಂದು ಅವರು ಭಾವಿಸುತ್ತಾರೆ. ಇಂತಹ ಕ್ರಿಮಿ ಯಾರದಾದರೂ ಮೆದುಳಿನಲ್ಲಿ ಪ್ರವೇಶಿಸಿದ್ದರೆ ಅದನ್ನು ಹೊರಗೆ ಹಾಕಬೇಕಾಗಿದೆ. ಪುರಾತನ ವಿದ್ವಾಂಸರನ್ನು ಮತ್ತು ವಲಿಗಳನ್ನು ಬಿಟ್ಟು ಬಿಡಿರಿ. ಈ ಕಾಲಘಟ್ಟದಲ್ಲಿ ವಾಸ್ತವಿಕ ಜ್ಞಾನ ಮತ್ತು ಇಸ್ಲಾಮ್ ಧರ್ಮದ ನಿಖರವಾದ ಚಿತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳಿಂದ ಮಾತ್ರ ದೊರಕಬಹುದಾಗಿದೆ. ನೆನಪಿಡಿರಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ತೀರ್ಪುಗಳೇ ವಾಸ್ತವಿಕ ತೀರ್ಪುಗಳಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಕಟಿಸಿದ ಜ್ಞಾನದ ಅಸ್ತಿಭಾರದ ಮೇಲೆ ಜಮಾಅತಿನ ಖಲೀಫರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನಗಳೇ ವಾಸ್ತವಿಕ ವ್ಯಾಖ್ಯಾನಗಳಾಗಿವೆ. ಅವುಗಳನ್ನು ಓದಿರಿ ಮತ್ತು ನಿಮ್ಮ ಜ್ಞಾನವನ್ನು ವರ್ಧಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಕಾಲಘಟ್ಟದ **ಹಕಮ್** ಮತ್ತು **ಅದಲ್** ಆಗಿ ಆಗಮಿಸಿದರು ಎಂಬುದನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಬೇಕು. ಆದುದರಿಂದ ಅವರು ಹೇಳಿರುವುದೇ ಸತ್ಯವಾಗಿದೆ. ಇಸ್ಲಾಮಿನ ಉಪದೇಶಗಳ ವಾಸ್ತವಿಕ ರೂಪ ಅದಾಗಿದೆ.

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಈ ಕಾಲಘಟ್ಟದ ಜನರ ಸುಧಾರಣೆಗೆ ಕಳುಹಿಸಿದಾಗ ಅವರಿಗೆ ನೇರವಾಗಿ ಜ್ಞಾನವನ್ನೂ ದಯಪಾಲಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ಒಬ್ಬನು ವಿಶ್ವಾಸ ಹೊಂದಿದರೆ ಅನಂತರ ಅವನು ತನ್ನ ನಂಬಿಕೆಯನ್ನು ದೃಢಪಡಿಸಿ ಅದರ ವಾಸ್ತವಿಕ ಜ್ಞಾನ ಗಳಿಸಬೇಕು. ಅಲ್ಲದೆ ಕೆಟ್ಟ ಸಂಶಯಗಳನ್ನು ಹೊಂದುವವನಾಗಬಾರದು. ದೃಢ ವಿಶ್ವಾಸವಿಲ್ಲದಿದ್ದರೆ ಏನೂ ಪ್ರಯೋಜನವಾಗಲಾರದು. ಆದುದರಿಂದ ಯೋಚಿಸಿರಿ, ನಿಮ್ಮ ಹೃದಯದಲ್ಲಿ ತೀರ್ಮಾನ ಕೈಗೊಳ್ಳಿರಿ. ನೀವು ನನ್ನನ್ನು ಬೈಅತ್ ಮಾಡಿ ನನ್ನನ್ನು ಹಕಮ್ ಅದಲ್ ಎಂದು ನಂಬಿರುವಾಗ ನನ್ನ ಯಾವುದೇ ತೀರ್ಪು ಅಥವಾ ಕೃತ್ಯದ ಬಗ್ಗೆ ನಿಮ್ಮ ಹೃದಯದಲ್ಲಿ ದುರ್ಭಾವನೆ ಅಥವಾ ಅತೃಪ್ತಿ ತಲೆದೋರುವುದಾದರೆ ನೀವು ನಿಮ್ಮ ನಂಬಿಕೆಯ ಬಗ್ಗೆ ಚಿಂತಿಸಬೇಕು. ನಾನು ಮಸೀಹ್ ಮೌಊದ್ ಎಂದೂ ವಾಸ್ತವಿಕವಾಗಿ ಹಕಮ್ ಆಗಿರುವೆನೆಂದೂ ನೀವು ಸತ್ಯ ಹೃದಯದಿಂದ ಅಂಗೀಕರಿಸುವುದಾದರೆ ನೀವು ನನ್ನ ಮುಂದೆ ನಿಮ್ಮ ಆಯುಧಗಳನ್ನು ಕೆಳಗಿರಿಸಬೇಕು. ನೀವು ಮೌನವಾಗಿರಬೇಕು, ನಾನು ಹೇಳಿದುದನ್ನು ಅಂಗೀಕರಿಸಬೇಕು. ಮಸೀಹ್ ಮೌಊದ್ ಮಾಡುವ ತೀರ್ಪುಗಳನ್ನು ಆದರಭಾವದಿಂದ ನೋಡಬೇಕು. ಹಾಗೆ ಮಾಡಿದರೆ ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪವಿತ್ರ ನುಡಿಗಳನ್ನು ಗೌರವಿಸುವವರಾಗುವಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಕ್ಷ್ಯ ಪರ್ಯಾಪ್ತವಾಗಿದೆ. ಅವರು ಹೇಳಿದ್ದಾರೆ: ಆಗಮಿಸುವ ವಾಗ್ದತ್ತ ಮಸೀಹ್ ನಿಮ್ಮ **ಇಮಾಮ್, ಹಕಮ್** ಮತ್ತು **ಅದಲ್** ಆಗುವರೆಂದು. ಅವರ ಮಾತಿನಿಂದ ನಿಮಗೆ ಸಮಾಧಾನವಾಗುವುದಿಲ್ಲವಾದರೆ ಬೇರೆ ರೀತಿ ಹೇಗೆ ತಾನೆ ಸಾಧ್ಯ.!

ನಾನು ಸತ್ಯವಂತನಲ್ಲವಾದರೆ ನೀವು ಹಿಂದಿರುಗಿ ಹೋಗಿರಿ. ಮತ್ತು ಸತ್ಯವಂತನನ್ನು ಹುಡುಕಿರಿ. ನೀವು ದೃಢವಾಗಿ ತಿಳಿದುಕೊಳ್ಳಿರಿ, ನಿಮಗೆ ಈಗ ಬೇರೆ ಒಬ್ಬ ಸತ್ಯವಂತನು ದೊರಕಲಾರನು. ನಿಮಗೆ ಇನ್ನೊಬ್ಬ ಸತ್ಯವಾದಿ ಸಿಗದಿದ್ದರೆ, ಸಿಗಲು ಎಂದಿಗೂ ಸಾಧ್ಯವೂ ಇಲ್ಲ, ನಾನು ನಿಮ್ಮಿಂದ ಆವಶ್ಯಪಡುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನಗೆ ನೀಡಿದ ಹಕ್ಕುಗಳನ್ನು ನೀಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಶತ್ರುಗಳ ಕುರಿತು ಈರೀತಿ ಹೇಳಿದರು: ಅವರು ನನ್ನ ಬಳಿಗೆ ಪರಿಶುದ್ಧ ಸಂಕಲ್ಪದೊಂದಿಗೆ ಬರುತ್ತಿದ್ದರೆ ನನಗೆ ಯಾವ ದೇವನು ಅನುಗ್ರಹಿಸಿದನೋ ಆ ದೇವನನ್ನು ನಾನು ಅವರಿಗೆ ತೋರಿಸಿಕೊಡುತ್ತಿದ್ದೆ. ಆ ದೇವನು ಅವರಿಗೆ ಅನುಗ್ರಹ ನೀಡುತ್ತಿದ್ದನು ಮತ್ತು ಅವರಿಗೆ ಮನವರಿಕೆ ಮಾಡಿಕೊಡುತ್ತಿದ್ದನು. ಆದರೆ ಈ ಜನರು ಜಿಪುಣತೆಯಿಂದಲೂ ಅಸೂಯೆಯಿಂದಲೂ ವರ್ತಿಸಿದರು. ನಾನು ಅವರಿಗೆ ಹೇಗೆ ಮನವರಿಕೆ ಮಾಡಿಕೊಡಲಿ.

ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ನಮ್ಮ ಕೆಲಸವೇನೆಂದರೆ ನಾವು ಆ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಬೇಕು. ನಾವು ಲೌಕಿಕ ಕೆಲಸಗಳಲ್ಲಿಯೇ ತಲ್ಲೀನರಾಗಬಾರದು. ಈ ಲೋಕ ತಾತ್ಕಾಲಿಕವಾಗಿದೆ. ಆದುದರಿಂದ ನಾವು ಪರಲೋಕದ ಬಗ್ಗೆ ಸಹ ಚಿಂತಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಮನುಷ್ಯನು ಸತ್ಯವಾದ ಹೃದಯದೊಂದಿಗೆ ಸತ್ಯವನ್ನು ಅನ್ವೇಷಿಸಲು ಬರುವುದಾದರೆ ಎಲ್ಲವೂ ತೀರ್ಮಾನಿಸಲ್ಪಡುವುವು. ಆದರೆ ಬೈಯ್ಯಲು ಮತ್ತು ಕೆಡುಕುಂಟುಮಾಡಲು ಉದ್ದೇಶಿಸುವುದಾದರೆ ಯಾವ

ಪ್ರಯೋಜನವೂ ಸಿಗಲಾರದು. ಹುಜಜುಲ್ ಕಿರಾಮ ಎಂಬ ಗ್ರಂಥದಲ್ಲಿ ಇಬ್ನು ಅರಬಿ ಹೀಗೆ ಬರೆದಿದ್ದಾರೆ. ವಾಗ್ದತ್ತ ಮಸೀಹ್ ಆಗಮಿಸಿದಾಗ ಅವರನ್ನು ಸುಳ್ಳು ಸೃಷ್ಟಿಸುವವನೆಂದೂ ಅಜ್ಞಾನಿ ಎಂದೂ ಜನರು ಕರೆಯುವರು. ಅವರು ಧರ್ಮವನ್ನು ಬಿಗಡಾಯಿಸಿದ್ದಾರೆ ಎಂದು ಹೇಳುವರು. ಈಗ ಹಾಗೆಯೇ ಸಂಭವಿಸುತ್ತಿದೆ. ಅಂತಹ ಆಕ್ಷೇಪಗಳನ್ನೇ ನನ್ನ ವಿರುದ್ಧ ಮಾಡಲಾಗುತ್ತಿದೆ. ಈ ಸಂದೇಹಗಳಿಂದ ಮುಕ್ತಿ ದೊರಕಬೇಕಾದರೆ ಅವನು ತನ್ನ ಸ್ವಂತ ಅಭಿಪ್ರಾಯಗಳನ್ನು ತ್ಯಜಿಸಬೇಕು ಮತ್ತು ತನ್ನ ಸ್ವಂತ ನಿಲುವುಗಳನ್ನು ಬಿಟ್ಟುಬಿಡಬೇಕು. ವಾದಿಸಿದವನು ಸತ್ಯವಂತನೋ ಅಲ್ಲವೋ ಎಂದು ಚಿಂತಿಸಬೇಕು. ವಾದಿಸಿದವನು ಸತ್ಯವಂತನೋ ಅಲ್ಲವೋ ಎಂದು ತಿಳಿಸಲು ಅಲ್ಲಾಹನನ್ನು ಬೇಡಿಕೊಳ್ಳಬೇಕು. ಕೆಲವು ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಪ್ರವಾದಿಗಳನ್ನು ನಂಬುವವರು ಒಳ್ಳೆಯ ಅಭಿಪ್ರಾಯ ಹೊಂದಿರುವವರೂ ಸಹನೆ ದೋರುವವರೂ ಸ್ಥಿರ ಚಿತ್ತತೆಯಿಂದ ವರ್ತಿಸುವವರೂ ಆಗಿದ್ದಾರೆ. ಅಲ್ಲಾಹನು ಅವರಿಗೆ ವಾಸ್ತವಿಕ ವಿಷಯ ಮನವರಿಕೆ ಮಾಡಿಕೊಡುವನು. ಹರ್ಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಸಹಾಬರು ಪ್ರಶ್ನೆ ಕೇಳುತ್ತಿರಲಿಲ್ಲ. ಯಾರಾದರೂ ಬಂದು ಪ್ರಶ್ನೆ ಕೇಳಿದರೆ ಅದರ ಉತ್ತರದಿಂದ ಲಾಭಗಳಿಸುತ್ತಿದ್ದರು. ಸಹಾಬರಿಗೆ ಪ್ರಶ್ನೆ ಕೇಳಲು ಧೈರ್ಯವಿರುತ್ತಿರಲಿಲ್ಲ. ಅವರು ಮೌನವಾಗಿ ಕುಳಿತಿರುತ್ತಿದ್ದರು. ನನ್ನ ಅಭಿಪ್ರಾಯದಲ್ಲಿ ಅತ್ಯುತ್ತಮವಾದುದು ಆದರಭಾವದಿಂದ ವರ್ತಿಸುವುದಾಗಿದೆ. ಪ್ರವಾದಿಗೆ ಸಂಬಂಧಿಸಿದ ಶಿಷ್ಟಾಚಾರಗಳನ್ನು ಅರ್ಥಮಾಡಿಕೊಳ್ಳದವನು ಮತ್ತು ಅವುಗಳನ್ನು ಅನುಸರಿಸದವನು ನಾಶಗೊಳ್ಳುವ ಸಾಧ್ಯತೆ ಇದೆ. ಆದುದರಿಂದ ನೀವು ಕೆಟ್ಟ ಸಂಶಯ ಹೊಂದಬಾರದು ಮತ್ತು ಅನಾವಶ್ಯಕ ಪ್ರಶ್ನೆಗಳನ್ನು ಕೇಳಬಾರದು.

ಪ್ರಥಮವಾಗಿ ನಾನು ನಿಮ್ಮೊಂದಿಗೆ ಹೇಳಲು ಬಯಸುವುದೇನೆಂದರೆ ನಾವು ಯಾವುದೇ ರೀತಿಯ ಕೀಳರಿಮೆ ಹೊಂದಬೇಕಾದ ಆವಶ್ಯಕತೆ ಇಲ್ಲ. ಕೆಲವು ವಿಷಯಗಳಿಗೆ ಸಂಬಂಧಿಸಿ ಪುರಾತನ ಹಿರಿಯರ ಮತ್ತು ವಲಿಗಳ ಅಭಿಪ್ರಾಯಗಳಿಗೆ ಈ ಹಕಮ್ ಮತ್ತು ಅದಲ್ ಮುಂದೆ ಯಾವ ಸ್ಥಾನವೂ ಇಲ್ಲ. ಖಾತಮುಲ್ ಖುಲಾಫಾ, ಖಾತಮುಲ್ ಅವ್‌ಲಿಯಾ, ಮುಜದ್ದಿದೆ ಆಖಿರುಝ್ಝುಮಾನ್, ಹಕಮ್ ಅದಲ್ ಆಗಿರುವ ವಾಗ್ದತ್ತ ಮಸೀಹ್ ಆಗಮಿಸಿರುವಾಗ ಅವರ ತೀರ್ಪುಗಳು, ಅವರ ಜ್ಞಾನ, ಇಸ್ಲಾಮ್ ಬಗ್ಗೆ ಅವರ ಉಪದೇಶಗಳು, ಅವುಗಳು ಮಾತ್ರ ಸತ್ಯವಾಗಿವೆ. ಅದಕ್ಕೆ ವಿರುದ್ಧವಾಗಿರುವ ಎಲ್ಲವೂ ತಪ್ಪಾಗಿವೆ. ನಾವು ಅವರನ್ನು ಬೈಅತ್ ಮಾಡಿದ ನಂತರ ಅವುಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ.

ಇನ್ನೊಂದು ನೆನಪಿಡಬೇಕಾದ ವಿಷಯವೇನೆಂದರೆ, ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಬೇಕು. ಅವುಗಳಿಂದ ಜ್ಞಾನಗಳಿಸಬೇಕು. ಅವು ನೈಜ ಇಸ್ಲಾಮ್ ಬಗ್ಗೆ ನಮಗೆ ತಿಳಿಸುತ್ತವೆ. ನಮ್ಮ ದೈನಂದಿನ ವ್ಯವಹಾರಗಳಲ್ಲಿ ನಾವು ಅವುಗಳಿಂದಲೇ ಉಲ್ಲೇಖಗಳನ್ನು ನೀಡಬೇಕು. ಇದು ಆವಶ್ಯಕವಾದುದಾಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಅವರ ಗ್ರಂಥಗಳಿಂದ ಸ್ವತಃ ಲಾಭಪಡೆಯಬೇಕು. ಮತ್ತು ಅವುಗಳನ್ನು ಪ್ರಚಾರ ಮಾಡಬೇಕು. ಲೋಕ ಏನು ಹೇಳುವುದೆಂಬುದರ ಬಗ್ಗೆ ನಾವು ಗಮನ ಹರಿಸಬಾರದು. ಯಾವುದು ತಪ್ಪೆಂದು ಇಸ್ಲಾಮ್ ಧರ್ಮ ಹೇಳುತ್ತದೋ ಅದನ್ನು ನಾವು ಸಹ ತಪ್ಪೆಂದು ಹೇಳಬೇಕು. ಅದರಲ್ಲಿ ಹೆದರಿಕೆ ಇರಬಾರದು. ಪ್ರತಿಯೊಬ್ಬ ಅಹ್ಮದಿ ಇದನ್ನು ಮನವರಿಕೆ ಮಾಡಬೇಕು.

ಹೆಚ್ಚು ಪ್ರಶ್ನೆ ಕೇಳಬಾರದು ಎಂದು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದು ಏಕೆಂದರೆ ಹೆಚ್ಚು ಪ್ರಶ್ನೆ ಕೇಳಿದರೆ ಪರಿಪೂರ್ಣ ಅನುಸರಣೆ ಪ್ರಕಟವಾಗುವುದಿಲ್ಲ. ಪ್ರವಾದಿ ಜನರ ಮುಖ ಚಹರೆಯಿಂದ ಪ್ರಶ್ನಿಸುವವನ ಸ್ಥಿತಿಯನ್ನು ಅರಿತುಕೊಂಡು ಅವನ ಸ್ಥಿತಿಗೆ ಅನುಸಾರವಾಗಿ ಉತ್ತರ ನೀಡುತ್ತಾರೆ. ಕೆಲವರು ಹೇಳಬಲ್ಲರು, ನಾನು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಳಮಟ್ಟದ ಗುಲಾಮನಾಗಿದ್ದೆ. ನನ್ನ ಮನಸ್ಸಿನಲ್ಲಿದ್ದ ಕೆಲವು ಪ್ರಶ್ನೆಗಳು ಅವರ ಭಾಷಣದಿಂದಲೇ ಉತ್ತರ ಪಡೆದವು ಎಂದು. ಪ್ರವಾದಿಗಳು ಜನರ ಬಗ್ಗೆ ಅತ್ಯಂತ ಹೆಚ್ಚು ಮನವರಿಕೆ ಮಾಡಿಕೊಂಡಿರುತ್ತಾರೆ. ಪ್ರಶ್ನೆ ಕೇಳುವವರ ಪ್ರಶ್ನೆಗಳಿಗೆ ಸೂಕ್ಷ್ಮವಾಗಿ ಉತ್ತರ ನೀಡುತ್ತಾರೆ. ಆದುದರಿಂದ ಪ್ರಶ್ನೆಗಳಿಗೆ ಉತ್ತರವಿಲ್ಲ ಎಂದು ಭಾವಿಸಬಾರದು. ಖಂಡಿತವಾಗಿಯೂ ಉತ್ತರವಿದೆ. ಆದರೆ ನಂಬುವವರು ತಮ್ಮ ಅನುಸರಣೆಯ ಮಟ್ಟವನ್ನು ವರ್ಧಿಸಬೇಕು.

ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತ್‌ಗೆ ಪದೇ ಪದೇ ಉಪದೇಶಿಸಿದ್ದಾರೆ. ಅವರ ವಿಶ್ವಾಸದ ಸ್ಥಿತಿ ಹೇಗಿರಬೇಕು ಎಂದು ವಿವರಿಸಿದ್ದಾರೆ. ಇದಕ್ಕೆ ಸಂಬಂಧಿಸಿ ಒಂದು ಉಲ್ಲೇಖ ನೀಡುತ್ತೇನೆ. ಅವರು ಬಹಳ ಆವಶ್ಯಕವಾದ ಒಂದು ಉಪದೇಶ ಹೀಗೆ ನೀಡಿದರು: ಈಗಿನ ಕಾಲ ಬಹಳ ಕೆಟ್ಟದಾಗುತ್ತಿದೆ. ವಿವಿಧ ರೀತಿಗಳ ಶಿರ್ಕ್, ಬಿದ್‌ಅತ್ ಮತ್ತು ಅನೇಕ ಕೆಡುಕುಗಳು ತಲೆದೋರಿವೆ. ಬೈಅತ್ ಮಾಡುವಾಗ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತೇನೆ ಎಂಬ ಪ್ರತಿಜ್ಞೆ ಅಲ್ಲಾಹನ ಮುಂದೆ ಮಾಡುವ ಪ್ರತಿಜ್ಞೆಯಾಗಿದೆ. ಮೃತನಾಗುವ ತನಕ ಈ ಪ್ರತಿಜ್ಞೆ ಪಾಲಿಸಬೇಕಾದುದು ಆವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ಬೈಅತ್ ಮಾಡಿಲ್ಲ ಎಂದೇ ಗ್ರಹಿಸಿರಿ. ಅಲ್ಲಾಹನ ಇಚ್ಛೆ ಪ್ರಕಾರ ಪೂರ್ಣವಾಗಿ ತಖ್ವವನ್ನು ಅವಲಂಬಿಸಿರಿ. ಈಗಿನ ಕಾಲಘಟ್ಟ ಬಹಳ ಆತಂಕದಾಯಕವಾಗಿದೆ. ಅಲ್ಲಾಹನ ಕೋಪ ಪ್ರಕಟವಾಗುತ್ತಾ ಇದೆ. ಯಾರು ತನ್ನನ್ನು ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ಪರಿವರ್ತಿಸುತ್ತಾನೋ ಅವನು ತನ್ನ ಜೀವ, ತನ್ನ ಕುಟುಂಬ, ತನ್ನ ಮಕ್ಕಳ ಮೇಲೆ ದಯೆದೋರುವವನಾಗುವನು. ಇಂದು ಲೋಕದ ಸ್ಥಿತಿ ಬಿಗಡಾಯಿಸುತ್ತಾ ಇದೆ. ಅದರ ಬಗ್ಗೆ ಚಿಂತಿಸಿ ಅಲ್ಲಾಹನ ಕಡೆಗೆ ಬಹಳ ಹೆಚ್ಚು ತಿರುಗುವ ಆವಶ್ಯಕತೆ ಇದೆ. ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಅಲ್ಲಾಹನ ಕೆಲವು ಮಾತುಗಳನ್ನು ಒಪ್ಪದೆ ಇರುವುದು ಅವನ ಎಲ್ಲ ಮಾತುಗಳನ್ನೂ ಬಿಟ್ಟುಬಿಡುವುದರ ಹಾಗೆ ಇರುತ್ತದೆ. ಒಂದು ಭಾಗ ಶೈತಾನನದು ಮತ್ತು ಇನ್ನೊಂದು ಭಾಗ ಅಲ್ಲಾಹನದು ಆಗಿದ್ದರೆ ಅಲ್ಲಾಹನು ಪಾಲುಗಾರನಾಗಲು ಇಷ್ಟಪಡುವುದಿಲ್ಲ.

ಅಲ್ಲಾಹನ ಕಡೆಗೆ ಬರುವುದು ಕಷ್ಟಕರವಾಗಿದ್ದರೂ ಅದೊಂದು ರೀತಿಯ ಮೃತ್ಯು ಆಗಿದ್ದರೂ ಕೊನೆಗೆ ಜೀವಿತವೂ ಅದರಲ್ಲಿಯೇ ಇರುತ್ತದೆ. ಯಾರು ತನ್ನಿಂದ ಶೈತಾನಿ ಪಾಲನ್ನು ಎಸೆದು ಬಿಡುತ್ತಾನೋ ಅವನು ಅನುಗ್ರಹ ಗಳಿಸಿದವನಾಗಿದ್ದಾನೆ. ಅವನ ಮನೆ, ಅವನ ಜೀವ ಅವನ ನಗರ, ಎಲ್ಲ ಕಡೆಗೂ ಅವನ ಅನುಗ್ರಹ ತಲಪುತ್ತದೆ. ಆದರೆ ಅದರಲ್ಲಿ ಒಂದು ಪಾಲು ಬಾಕಿಯಾದರೆ ಅನುಗ್ರಹ ಸಿಗಲಾರದು. ನೀವು ಒಬ್ಬ ಮನುಷ್ಯನ ಮುಂದೆ ಹಲವು ಒಳ್ಳೆಯ ಮಾತುಗಳನ್ನು ನಾಲಗೆಯಿಂದ ಹೇಳಿ ಕೃತ್ಯರೂಪದಲ್ಲಿ ಏನೂ ಮಾಡದಿದ್ದರೆ ಅವನು ಸಂತೋಷಪಡಲಾರನು. ಅದೇ ರೀತಿ ಅಲ್ಲಾಹನ ವಿಷಯವಾಗಿದೆ. ಅವನು ಎಲ್ಲ ಅಭಿಮಾನಿಗಳಿಗಿಂತ ಹೆಚ್ಚು ಅಭಿಮಾನಿ ಆಗಿದ್ದಾನೆ.

ಕೆಡುಕು ಎರಡು ವಿಧಗಳಲ್ಲಿವೆ. ಒಂದು ಅಲ್ಲಾಹನ ಮಹತ್ವ ಅರಿಯದಿರುವುದು, ಅವನ ಆರಾಧನೆ ಮತ್ತು ಅನುಸರಣೆಯಲ್ಲಿ ಉದಾಸೀನತೆ ತೋರುವುದು. ಎರಡನೆಯದು ಅವನ ದಾಸರ ಮೇಲೆ ದಯೆ ತೋರಿಸದಿರುವುದು ಅವರ ಹಕ್ಕುಗಳನ್ನು ಅವರಿಗೆ ನೀಡದಿರುವುದು. ಈ ಎರಡು ರೀತಿಯ ಕೆಡುಕುಗಳನ್ನೂ ಮಾಡಬಾರದು. ಅಲ್ಲಾಹನನ್ನು ಸ್ಥಿರವಾಗಿ ಅನುಸರಿಸಬೇಕು. ಬೈಅತ್ ಪ್ರತಿಜ್ಞೆ ಈಡೇರಿಸಬೇಕು. ಅಲ್ಲಾಹನ ದಾಸರಿಗೆ ಕಷ್ಟ ಕೊಡಬಾರದು. ಪವಿತ್ರ ಖುರ್‌ಆನನ್ನು ಗಾಢವಾಗಿ ಚಿಂತಿಸಿ ಓದಬೇಕು. ಅದರ ಆಜ್ಞೆಗಳನ್ನು ಪಾಲಿಸಬೇಕು. ಎಲ್ಲ ರೀತಿಯ ಹಾಸ್ಯ ವಿನೋದ, ಅನಾವಶ್ಯಕ ಮತ್ತು ಶಿರ್ಕ್‌ಗೆ ಸಂಬಂಧಿಸಿದ ಕೂಟಗಳಿಂದ ದೂರವಿರಬೇಕು. ಐದು ಹೊತ್ತಿನ ನಮಾಝ್ ಅನುಷ್ಠಿಸಬೇಕು. ನೀವು ಅನುಷ್ಠಿಸದೆ ಇರುವ ಯಾವುದೇ ಆಜ್ಞೆ ಇರಬಾರದು. ನಿಮ್ಮ ದೇಹವನ್ನು ಶುಚಿಯಾಗಿರಿಸಿರಿ. ನಿಮ್ಮ ಹೃದಯವನ್ನು ಎಲ್ಲ ವಿಧಗಳ ಅಸೂಯೆ ಮತ್ತು ದ್ವೇಷಗಳಿಂದ ಮುಕ್ತವಾಗಿರಿಸಿರಿ. ಅಲ್ಲಾಹನು ನಿಮ್ಮಿಂದ ಆವಶ್ಯಪಡುವುದು ಇವುಗಳಾಗಿವೆ.

ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನನ್ನು ಪರಿಶೋಧಿಸಬೇಕಾಗಿದೆ– ತಾನು ತನ್ನನ್ನು ನಿಷ್ಪ್ರಯೋಜಕ ಮತ್ತು ಬಹುದೇವಾರಾಧಕ ಕೂಟಗಳಿಂದ ಎಷ್ಟರ ಮಟ್ಟಿಗೆ ರಕ್ಷಿಸಿ ಕೊಂಡಿದ್ದೇನೆ ಎಂದು. ಇಂಟರ್‌ನೆಟ್, ಟಿ.ವಿ. ಮತ್ತು ಇತರ ಕೆಲಸ ಮತ್ತು ಕೂಟಗಳು ನಿಮ್ಮನ್ನು ನಮಾಝ್‌ನಿಂದಲೂ ಆರಾಧನೆಗಳಿಂದಲೂ ನಿರ್ಲಕ್ಷ್ಯವುಳ್ಳರನ್ನಾಗಿ ಮಾಡುವುದಾದರೆ ಅವು ಸಹ ಬಹುದೇವಾರಾಧಕ ಕೂಟಗಳಾಗಿವೆ. ಆದುದರಿಂದ ನಾವು ನಮ್ಮನ್ನು ಇಷ್ಟು ಗಾಢವಾಗಿ ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿಶಿಷ್ಟವಾಗಿ ನಮ್ಮೊಂದಿಗೆ ಐದು ಹೊತ್ತಿನ ನಮಾಝ್ ಬಗ್ಗೆ ಶ್ರದ್ಧೆ ನೀಡಲು ಹೇಳಿದ್ದಾರೆ. ನಮಾಝನ್ನು ಸ್ಥಾಪಿಸಲು ಹೇಳಿದ್ದಾರೆ. ನಮಾಝನ್ನು ಸ್ಥಾಪಿಸುವುದು ಬಾಜಮಾಅತ್ ನಮಾಝ್ ಮಾಡುವ ಮೂಲಕವಾಗಿದೆ. ನಮಾಝನ್ನು ಅದರ ಸಮಯಗಳಲ್ಲಿ ಕ್ರಮಬದ್ಧವಾಗಿ ಅನುಷ್ಠಿಸಬೇಕು. ನಾನು ಪರಿಶೋಧಿಸಿದ್ದೇನೆ. ನನಗೆ ಈ ವಿಷಯಕ್ಕೆ ಸಂಬಂಧಿಸಿ ಬಹಳ ಬಲಹೀನತೆ ಇಲ್ಲಿ ಸಹ ಕಾಣಿಸುತ್ತದೆ. ಅದೇ ರೀತಿ ಸಾಮಾಜಿಕ ಕೆಡುಕುಗಳಿವೆ. ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವಕ್ಕೆ ಸಂಬಂಧಿಸಿ ಆವಶ್ಯಕವಾದ ಮಟ್ಟ ಕೆಲವು ಜನರಲ್ಲಿ ಕಾಣಿಸುವುದಿಲ್ಲ. ಕೆಲವೆಡೆ ದ್ವೇಷ ಮತ್ತು ಅಸೂಯೆ ಕಾಣಿಸುತ್ತದೆ. ಒಟ್ಟಿನಲ್ಲಿ ಪ್ರತಿಯೊಬ್ಬನು ತನ್ನನ್ನು ಇಣುಕಿ ನೋಡುವ ಆವಶ್ಯಕತೆ ಇದೆ. ನೀವು ಇತರರ ಬಗ್ಗೆ ಅವರು ಹೇಗಿದ್ದಾರೆಂದು ನೋಡಬೇಡಿರಿ. ನೀವು ನಿಮ್ಮನ್ನು ಸುಧಾರಣೆ ಮಾಡಿರಿ. ನೀವು ನಿಮ್ಮನ್ನು ವೀಕ್ಷಿಸಿರಿ. ನೀವು ನಿಮ್ಮನ್ನು ಸುಧಾರಣೆ ಮಾಡಿದರೆ ಉಳಿದ ಕೆಡುಕುಗಳು ದೂರ ಸರಿಯುವುವು. ನಾನು ಎಲ್ಲ ರೀತಿಗಳಲ್ಲೂ ಪರಿಶುದ್ಧನಾಗಿದ್ದೇನೆ ಎಂದು ವಾದಿಸಲು ಯಾರಿಗೂ ಸಾಧ್ಯವಿಲ್ಲ.

ನಾವು ನಮ್ಮ ಕುಂದು ಕೊರತೆಗಳ ಬಗ್ಗೆ ಮತ್ತು ತಪ್ಪುಗಳ ಬಗ್ಗೆ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ದಯಪಾಲಿಸಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ನಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿಭಾಯಿಸುವವರಾಗುವಂತೆ ಅಲ್ಲಾಹನು ಮಾಡಲಿ – ಆಮೀನ್

—————*****—————

***Friday Sermon delivered by Hadrath Khaleefatul Masih Al Khamis***(atba)

*At, Raunheim, Germany on 21-04-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon